ಆ) ಹಾಗಿದ್ದಲ್ಲಿ, ತೆಗೆದುಕೊಂಡ ಕ್ರಮಗಳೇನು;

ಇ) ಕುಡಿಯುವ ನೀರಿನ ಯೋಜನೆ ಮಂಜೂರಾತಿಗಾಗಿ ನೀಡಲು ಸರ್ಕಾರದ ಬಳಿ ಇರುವುದು ನಿಜವೇ;

4. ಹಾಗಿದ್ದಲ್ಲಿ ಸದರಿ ಯೋಜನೆಗೆ ಮಂಜೂರಾತಿ ನೀಡಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ?

ಈ) ಯಾವಾಗ ನೀಡಲಾಗುವುದು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯ ಮಂತ್ರಿಯವರು):

ಅ) ಬಂದಿದೆ.

ಆ) ಹೊನ್ನಾಳಿ ಪಟ್ಟಣಕ್ಕೆ ತುಂಗಭದ್ರಾ ನದಿಯನ್ನು ಮೂಲವಾಗಿಟ್ಟು ಕೊಂಡು ನೀರು ಸರಬರಾಜು ಯೋಜನೆಯನ್ನು ರೂ.350.00 ಲಕ್ಷಗಳಿಗೆ ಅಂದಾಜನ್ನು ತಯಾರಿಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಜಂಟಿ ನೆರವಿನಿಂದ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ. ಹಾಗೂ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) –ಹೌದು–

ಇ) ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಈ ಯೋಜನೆಗೆ ಆಯವ್ಯಯದಲ್ಲಿ ಹಣವನ್ನು ಒದಗಿಸಿಕೊಂಡು ನಂತರ ಕೇಂದ್ರ ಸರ್ಕಾರದ ಅನುಮೋದನೆಯನ್ನು ಪಡೆದು ಮಂಜೂರಾತಿಯನ್ನು ನೀಡಲಾಗುವುದು.

332 (627) ಶ್ರೀ ರೇಣುಕಾಚಾರ್ಯ ಎಂ.ಪಿ. (ಹೊನ್ನಾಳಿ):– ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾಳಿ ತಾಲ್ಲೂಕಿನಲ್ಲಿ ಹಾದು ಹೋಗುವ ಭದ್ರಾ ನಾಲೆಗಳು ಪ್ರಾರಂಭವಾದಾಗಿನಿಂದಲೂ ದುರಸ್ಥಿಯಾಗದೆ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಭದ್ರಾ ನಾಲೆಗಳಲ್ಲಿ ಈಗಾಗಲೇ ಹೂಳು ತುಂಬಿ ಗೇಟುಗಳಿಲ್ಲದೇ ಕೊನೆಯ ಭಾಗದ ರೈತರಿಗೆ ನೀರು ಸಮಪರ್ಕವಾಗಿ ತಲುಪದೇ ಇರುವ ಬಗ್ಗೆ ರೈತರು ಸಂಘ–ಸಂಸ್ಥೆಗಳು ಸಾಕಷ್ಟು ಹೋರಾಟ ನಡೆಸಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಸರ್ಕಾರ ಈ ನಾಲೆಗಳ ಆಧುನೀಕರಣಕ್ಕೆ ಕೈಗೊಂಡ ಕ್ರಮಗಳು ಹಾಗೂ ಇದಕ್ಕಾಗಿ ಮೀಸಲಿಟ್ಟ ಹಣವೆಷ್ಟು?

ಈ) ಇದರ ಬಗ್ಗೆ ಸರ್ಕಾರದ ಮುಂದಿನ ನಿಲುವೇನು? ವಿವರ ನೀಡುವುದು

ಉ) ಈ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ದಿನಗೂಲಿ ನೌಕರರೆಷ್ಟು? ಈ ಬಗ್ಗೆ ಕ್ರಮವೇನು ಕೈಗೊಂಡಿದ್ದೀರಿ.

ಊ) ಹಾಗೂ ಭದ್ರಾ ನಾಲೆಗಳಲ್ಲಿ ಕೆಲಸ ಮಾಡಿದ ಗುತ್ತಿಗೆದಾರರಿಗೆ ಸರ್ಕಾರದಿಂದ ಪಾವತಿ ಮಾಡಲು ಬಾಕಿ ಇರುವ ಹಣವೆಷ್ಟು? ವಿವರ ನೀಡುವುದು.

ಋ) ಬಾಕಿ ಇದ್ದಲ್ಲಿ ಎಷ್ಟು ಸಮಯದಲ್ಲಿ ಗುತ್ತಿಗೆ ಹಣ ಸಂದಾಯ ಮಾಡುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು): ಅ) ಕಾಲುವೆಯಲ್ಲಿ ನೀರು ಹರಿಸಲು ಬೇಕಾಗುವ ಅತಿ ಅವಶ್ಯವಿರುವ ವಾರ್ಷಿಕ ನಿರ್ವಹಣಾ ಕಾಮಕಾರಿಗಳನ್ನು ಅನುದಾನದ ಲಭ್ಯತೆಗೆ ಅನುಗುಣವಾಗಿ ಕೈಗೊಳ್ಳಲಾಗಿರುತ್ತದೆ.

ಆ) ಬಂದಿದೆ.

ಇ) ನಾಲೆಗಳ ಆಧುನೀಕರಣಕ್ಕಾಗಿ ರೂ.471.00 ಕೋಟಿ ವೆಚ್ಚದಲ್ಲಿ ಪ್ರಸ್ತಾವನೆಯನ್ನು ಸಿದ್ಧಪಡಿಸಿದ್ದು, ಇದನ್ನು ಕರ್ನಾಟಕ ನೀರಾವರಿ ನಿಗಮದ ಮೂಲಕ ಅನುಷ್ಟಾನಗೊಳಿಸಲು ಉದ್ದೇಶಿಸಲಾಗಿದೆ ರೂ.17.00 ಕೋಟಿ ವೆಚ್ಚದಲ್ಲಿ ಆಧ್ಯತೆಯ ಮೇರೆಗೆ ತುರ್ತು ದುರಸ್ಥಿ ಕಾಮಗಾರಿಯನ್ನು ಕಾರ್ಯಗತಗೊಳಿಸುವ ಪ್ರಸ್ತಾವನೆಯೂ ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಪ್ರಶ್ನೆ 'ಇ'ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಹೊನ್ನಾಳಿ ತಾಲ್ಲೂಕಿನಲ್ಲಿ ಬರುವ ಕಾಲುವೆಗಳು ನಂ:3, ನಾಲಾ ವಿಭಾಗ, ಮಲೆಬೆನ್ನೂರು, ವ್ಯಾಪ್ತಿಯಡಿಯಲ್ಲಿ ಬರುತ್ತಿದ್ದು, ಈ ವಿಭಾಗದಲ್ಲಿ ಯಾವುದೇ ದಿನಗೂಲಿ ನೌಕರರು ಕೆಲಸ ನಿರ್ವಹಿಸುತ್ತಿರುವುದಿಲ್ಲ.

ಊ) ಭದ್ರಾ ನಾಲೆಗಳಿಗೆ ಸಂಬಂಧಿಸಿದಂತೆ ಯೋಜನೆ ಹಾಗೂ ಯೋಜನೇತರ ಲೆಕ್ಕ ಶೀರ್ಷಿಕೆಗಳಲ್ಲಿ ಗುತ್ತಿಗೆದಾರರಿಗೆ ಸರ್ಕಾರದಿಂದ ಪಾವತಿಸಲು ಬಾಕಿ ಇರುವ ಹಣದ ವಿವರಗಳು ಈ ಕೆಳಗಿನಂತಿವೆ.

		(ರೂ.ಲಕ್ಷಗಳಲ್ಲಿ)
1.	4701–ಭದ್ರಾ	652.70
2.	4701–ಭದ್ರಾ ಆಧುನೀಕರಣ	276.73
3.	2701–ಭದ್ರಾ ಯೋಜನೇತರ	1545.62
4.	2702–ಸಣ್ಣ ಕೆರೆಗಳು	130.00
5.	3054–ರಸ್ತೆ ಮತ್ತು ಸೇತುವೆಗಳು	739.09
6.	5054–ರಸ್ತೆ ಮತ್ತು ಸೇತುವೆಗಳು	3.56
7.	2075–ಕಾಡಾ	458.20
	ಒಟ್ಟು	**3805.90**

ಋ) ಸರ್ಕಾರದಿಂದ ಪ್ರತಿ ತಿಂಗಳೂ ಬಿಡುಗಡೆ ಆಗುತ್ತಿರುವ ಹಣ ಭರವಸೆ ಪತ್ರದ ಲಭ್ಯತೆ ಅನುಸಾರ ಹಾಗೂ ಜೇಷ್ಠತೆ ಆಧಾರದ ಮೇಲೆ ಗುತ್ತಿಗೆದಾರರ ಬಾಕಿ ಬಿಲ್ಲುಗಳಿಗೆ ಹಣ ಸಂದಾಯ ಮಾಡಲಾಗುತ್ತಿದೆ.

333 (629) ಶ್ರೀ ರೇಣುಕಾಚಾರ್ಯ ಎಂ.ಪಿ. (ಹೊನ್ನಾಳಿ):– ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾಳಿ ತಾಲ್ಲೂಕನ್ನು ಶಿವಮೊಗ್ಗ ಜಿಲ್ಲೆಯಿಂದ ದಾವಣಗೆರೆ ಜಿಲ್ಲೆಗೆ ಸೇರ್ಪಡೆ ಮಾಡುವ ಸಂದರ್ಭದಲ್ಲಿ ನಡೆದ ಗಲಭೆಗೆ ಸಂಬಂಧಪಟ್ಟಂತೆ ಎಷ್ಟು ಜನರ ಮೇಲೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ;

ಆ) ಸದರಿ ಗಲಭೆಗೆ ಸಂಬಂಧಪಟ್ಟಂತೆ ದಾಖಲಿಸಿಕೊಂಡಿರುವ ಪ್ರಕರಣಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ ಸರಕಾರದ ಸ್ಪಷ್ಟ ನಿಲುವೇನು?

ಇ) ಯಾವಾಗ ಹಿಂದಕ್ಕೆ ಪಡೆಯಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು):

ಅ) 268 ಜನರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಆ) ಸದರಿ ಗಲಭೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹೂಡಲಾಗಿದ್ದ 11 ಮೊಕದ್ದಮೆಗಳ ಪೈಕಿ 150 ಜನರ ವಿರುದ್ಧ ಹೂಡಲಾಗಿದ್ದ ಈ ಕೆಳಕಂಡ 5 ಮೊಕದ್ದಮೆಗಳನ್ನು ಅಭಿಯೋಜನೆಯಿಂದ ದಿನಾಂಕ 12–4–2002ರಂದು ಈಗಾಗಲೇ ಹಿಂಪಡೆಯಲಾಗಿದೆ.

1. ಹೊನ್ನಾಳಿ ಪೊಲೀಸ್ ಠಾಣೆ ಗುನ್ನೆ ಸಂಖ್ಯೆ: 162/97

2. ನ್ಯಾಮತಿ ಪೊಲೀಸ್ ಠಾಣೆ ಗುನ್ನೆ ಸಂಖ್ಯೆ: 192/97

3. ನ್ಯಾಮತಿ ಪೊಲೀಸ್ ಠಾಣೆ ಗುನ್ನೆ ಸಂಖ್ಯೆ: 197/97

4. ನ್ಯಾಮತಿ ಪೊಲೀಸ್ ಠಾಣೆ ಗುನ್ನೆ ಸಂಖ್ಯೆ: 199/97

5. ನ್ಯಾಮತಿ ಪೊಲೀಸ್ ಠಾಣೆ ಗುನ್ನೆ ಸಂಖ್ಯೆ: 201/97

ಇ) ಉಳಿದ 6 ಪ್ರಕರಣಗಳು ಪೊಲೀಸ್ ಇಲಾಖಾ ನೌಕರರಿಗೆ ಕಲ್ಲಿನಿಂದ ಹೊಡೆದು ತೀವ್ರ ಪೆಟ್ಟು ಮಾಡಿರುವಿಕೆ, ಸಮಾಜ ಕಲ್ಯಾಣ ಇಲಾಕೆಯ ಕಛೇರಿಯ ಬೀಗ ಮುರಿದು ಅಕ್ರಮ ಪ್ರವೇಶ ಮಾಡಿ ಕಾಗದ ಪತ್ರ, ಟ್ರೆಜರಿಗೆ ಬೆಂಕಿ ಹಾಕುವಿಕೆ, ಸಾರ್ವಜನಿಕ ಸ್ವತ್ತಿಗೆ ಪೆಟ್ರೋಲ್ ಸುರಿದು ಬೆಂಕಿ ಇಡುವಿಕೆ, ನ್ಯಾಮತಿ ನಾಡ ಕಛೇರಿಯ ಬೀಗ ಮುರಿದು ಅಕ್ರಮ ಪ್ರವೇಶ ಮಾಡಿ ಕಿಚ್ಚು ಇಡುವಿಕೆ, ಸರ್ಕಾರಿ ಜೀಪ್ ಸುಡುವಿಕೆ, ಪ್ರಾಥಮಿಕ ಶಾಲೆಯ ಪುಸ್ತಕ ಭಂಡಾರಕ್ಕೆ ಬೆಂಕಿ ಹಚ್ಚುವಿಕೆ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಬ್ಯಾಂಕಿನ ಕಿಟಕಿ ಮುರಿದು ಬ್ಯಾಂಕಿನ ದಾಖಲೆಗೆ ಬೆಂಕಿ ಹಚ್ಚುವಿಕೆ ಅಂತಹ ಗಂಭೀರ ಅಪರಾಧಗಳನ್ನು ಒಳಗೊಂಡಿರುತ್ತದೆ. ಆದಕಾರಣ ಈ 6 ಪ್ರಕರಣಗಳನ್ನು ಅಭಿಯೋಜನೆಯಿಂದ ಹಿಂಪಡೆಯಲಾಗಿರುವುದಿಲ್ಲ.